**ಸಾಕ್ಷಿಯನ್ನು ದಿಃ 11.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ರಸ್ತೆಯಲ್ಲಿ ಆಯಿತು ಎಂದರೆ ಸರಿ. ಅಪಘಾತ ಮುಖ್ಯ ರಸ್ತೆಯಲ್ಲಿ ಆಗಿದೆ. ಆ ರಸ್ತೆಯಲ್ಲಿ ಹೆಚ್ಚು ವಾಹನ ಸಂಚರಿಸುತ್ತವೆ ಎಂದರೆ ಸರಿ. ನನಗೆ ಬೈಕ್ ಅಪಘಾತ ಪಡಿಸಿದೆ, ನಂಬರ್ ಮರೆತುಹೋಗಿದೆ. ನಾನು ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದೆ. ಡಿಕ್ಕಿ ಪಡಿಸಿದ ಬೈಕ್ ಸಹ ರಸ್ತೆಯ ಎಡಬದಿಯಲ್ಲಿ ಬಂದಿದೆ ಎಂದರೆ ಸರಿ. 1 ನೇ ಎದುರುದಾರ ಬೈಕ್ ಸವಾರನು ರಸ್ತೆ ಎಡಬದಿಯಲ್ಲಿ ಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿದ್ದು ನಾನೇ ಅಜಾಗರೂಕತೆಯಿಂದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತ ಆಗಿದೆ ಎಂದು ಗೊತ್ತಿದ್ದ ಕಾರಣ ತಕ್ಷಣವೇ ದೂರು ನೀಡಿಲ್ಲ ಎಂದರೆ ಸರಿಯಲ್ಲ. ಬೈಕ್ ಸವಾರ ಡಿಕ್ಕಿ ಪಡಿಸಿದ ನಂತರ ಕೆಳಗೆ ಬಿದ್ದಿದ್ದನೋ ಇಲ್ಲವೋ ನನಗೆ ಗೊತ್ತಿಲ್ಲ. ಅಪಘಾತ ದಿಃ 19.05.2023 ರಲ್ಲಿ ಆಗಿದೆ. ಅಪಘಾತ ಆಗಿ ಎರಡು ವರ್ಷ ಆದ ಕಾರಣ ಗಾಯಗಳು ವಾಸಿಯಾಗಿದ್ದರೂ ಸಹ ವಾಸಿಯಾಗಿಲ್ಲ ಎಂದು ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2023 ರಲ್ಲಿ ಬಿಡುಗಡೆಯಾದಾಗ ವೈಧ್ಯರು ಭಾರ ಹಾಕದೇ ನಡೆಯಲು ಹೇಳಿದ್ದರು ಎಂದರೆ ಸರಿ. ಆ ಪ್ರಕಾರ ನಾನು ಅವರ ಸಲಹೆಯನ್ನು ಪಾಲಿಸಿ ಈಗ ಸರಿಯಾಗಿ ನಡೆಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಕರ್ ಇಲ್ಲದೇ ನಡೆಯಲು ಆಗುವುದಿಲ್ಲ ಎನ್ನುತ್ತಾರೆ. ನನಗೆ ನಡೆಯಲು ಆದರೂ ಸಹ ನಾನು ವಾಕರ್ ಇಲ್ಲದೇ ನಡೆಯಲು ಪ್ರಯತ್ನಿಸುತ್ತಿಲ್ಲ ಎಂದರೆ ಸರಿಯಲ್ಲ.

2. ಹಾಜರು ಪಡಿಸಿರುವ ದಾಖಲೆಗಳ ಪ್ರಕಾರ ಎಲ್ಲಾ ಬಿಲ್ಲುಗಳು 2023 ಕ್ಕೆ ಸೇರಿದ್ದು ಎಂದರೆ ಸರಿ. ದಿಃ 05.03.2024 ರಂದು ವೈಧ್ಯರಲ್ಲಿ ಹೋದಾಗ ನನಗೆ ನೀಡಿರುವ ಬೆಲ್ಟ್ ಅನ್ನು ಭಾರ ಎತ್ತಿಕೊಳ್ಳಲು ಹೋದಾಗ ಹಾಕಿಕೊಳ್ಳಲು ನೀಡಿದ್ದರು ಎಂದರೆ ಸರಿ. ಆದ ಕಾರಣ ನನಗೆ ಈಗ ಯಾವುದೇ ಸಮಸ್ಯೆ ಇಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸಮಸ್ಯೆ ಇದೆ ಎಂದು

ಸುಳ್ಳಾಗಿ ಅರ್ಜಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ. ನನ್ನ ಸಂಪಾದನೆಯನ್ನು ತೋರಿಸಲು ಯಾವುದೇ ದಾಖಲೆ ಇಲ್ಲ. ನಾನು ಅರ್ಜಿಯಲ್ಲಿ ತೋರಿಸಿದ ಪ್ರಮಾಣದಲ್ಲಿ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ನಿರ್ಲಕ್ಷ್ಯತನ ಇರುವ ಕಾರಣ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.